**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 27.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ಃ | ವಿಠ್ಠಲಗೌಡ ಪಾಟೀಲ |
| ತಂದೆಯ ಹೆಸರು | ಃ | ಮೇರಿಗೇರಿಗೌಡ |
| ವಯಸ್ಸು | ಃ | 68 ವರ್ಷ |
| ಉದ್ಯೋಗ | ಃ | ಪ್ರಾಂಶುಪಾಲರು |
| ವಾಸ ಸ್ಥಳ | ಃ | ಹುಲಕೋಟಿ |

**ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ಶ್ರೀಮತಿ ವಿ ಪಿ ಹೆಚ್ ವಕೀಲರಿಂದಃ**

ನನಗೆ ನ್ಯಾಯಾಲಯದಿಂದ ಈ ಪ್ರಕರಣದಲ್ಲಿ ಸಾಕ್ಷಿ ನೀಡಲು ಸಮನ್ಸ ಬಂದಿತ್ತು. ಸಾಕ್ಷಿಗೆ ನಿಪಿ.11 ನ್ನು ತೋರಿಸಿದಾಗಿ ಸಾಕ್ಷಿ ಸದರಿ ದಾಖಲೆಯನ್ನು ನಾನೇ ಖುದ್ದಾಗಿ ನೀಡಿರುತ್ತೇನೆ. ಸದರಿ ದಾಖಲೆಯಲ್ಲಿ ನನ್ನ ಸಹಿ ಹಾಗೂ ಮೊಹರು ಇದೆ ಎನ್ನುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ 2 ನೇ ಎದುರುದಾರರ ಪರ ಶ್ರೀ ಎ ಎಸ್ ಎಸ್ ವಕೀಲರಿಂದಃ**

ನಾನು ಸುಮಾರು 17 ವರ್ಷಗಳಿಂದ ಸದರಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಸಾಮಾನ್ಯವಾಗಿ ಯಾವುದೇ ಒಬ್ಬ ನೌಕರನನ್ನು ಬಡ್ತಿ ಅಥವಾ ಹಿಂಬಡ್ತಿ ಮಾಡಬೇಕೆಂದರೆ ಕಚೇರಿಯ ಅಧೀಕೃತ ಆದೇಶ ಆಗುತ್ತದೆ ಎಂದರೆ ಸರಿ. ಈ ಕೇಸಿನ ಅರ್ಜಿದಾರರಿಗೆ ಅವರ ಕೆಲಸದ ಗುಣಮಟ್ಟ ಕಡಿಮೆಯಾಗಿದೆ ಎಂಬುದಾಗಿ ನಿಮ್ಮ

ಕಚೇರಿಯಿಂದ ನೋಟೀಸ್ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅಧೀಕೃತವಾಗಿ



ಕಚೇರಿಯಿಂದ ಅವರಿಗೆ ಡಿಮೋಶನ್ ಮಾಡುತ್ತೇವೆ ಎಂಬುದಾಗಿ ಶೋಕಾಸ್ ನೋಟೀಸ್ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿರುವುದಿಲ್ಲ ಆದರೆ ಮೌಖಿಕವಾಗಿ ಹೇಳಿರುತ್ತೇವೆ ಎನ್ನುತ್ತಾರೆ. ನೀವು ಅವರ ದೈಹಿಕ ಸಾಮರ್ಥ್ಯದ ಬಗ್ಗೆ ವೈದ್ಯಕೀಯ ದಾಖಲೆಗಳನ್ನು ಅವರಿಂದ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈ ಕೇಸಿನ ಅರ್ಜಿದಾರರು ನಮ್ಮಲ್ಲಿ ಮೊದಲಿನಂತೆಯೇ ಕೆಲಸ ಮಾಡುತ್ತಿದ್ದಾರೆ ಹಾಗೂ ಅವರಿಗೆ ಯಾವುದೇ ಡಿಮೋಶನ್ ಆಗಿರುವುದಿಲ್ಲ ಮತ್ತು ಅವರ ವೇತನ ಕೂಡ ಕಡಿಮೆಯಾಗಿರುವುದಿಲ್ಲ ಎಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ಅರ್ಜಿದಾರರಿಗೆ ಪರಿಹಾರ ಪಡೆಯಲು ಅನುಕೂಲವಾಗಲಿ ಎಂದು ನಿಪಿ.11 ನ್ನು ಖೊಟ್ಟಿಯಾಗಿ ತಯಾರಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 1 ನೇ ಎದುರುದಾರರ ಪರ ವಕೀಲರಿಂದಃ**

**(2 ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಕೋರಿದ್ದು ಅವರ ಮನವಿಯನ್ನು ಪುರಸ್ಕರಿಸಿ ಅಳವಡಿಸಿಕೊಳ್ಳಲಾಯಿತು)**

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**